# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಂಖ್ಯೆ:**ಸ.ಕಂ.ಅ(ಪು.ನ)ಪಿಆರ್/ /18-19

ಸಹಾಯಕ ಕಂದಾಯ ಅಧಿಕಾರಿರವರ ಕಛೇರಿ,
(ಪುಲಿಕೇಶಿನಗರ)ಉಪವಿಭಾಗ, ಕ್ವೀನ್ಸ್ ರಸ್ತೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ : 10/01/2019

ದಿನಾಂಕ: 05/01/2019 ರಂದು ವಾರ್ಡ್-47 ರ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-

**ಸಭೆಗೆ ಹಾಜರಿದ್ದವರು:**

1. ಬಿಬಿಎಂಪಿ, ವಾರ್ಡ್ ಸಂಖ್ಯೆ: 47 ರ ಮಾನ್ಯ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ.ಆರ್.ಸಂಪತ್‌ರಾಜ್.
2. ಸಹಾಯಕ ಕಂದಾಯ ಅಧಿಕಾರಿ(ಪುಲಿಕೇಶಿನಗರ) ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಎನ್.ಕೃಷ್ಣಪ್ಪ.
3. ವಾರ್ಡ್ ಸಮಿತಿಯ ಸಮಿತಿ ಸದಸ್ಯರು ಸಭೆಗೆ ಹಾಜರಿದ್ದರು.
4. ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಕೇಶಿನಗರ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ ಸ್ಟ್ರೀಟ್‌ಲೈಟ್/ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರು/ಕಛೇರಿ ನೌಕರರು.

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದ್ದಂತೆ ಅಧ್ಯಕ್ಷರಾದ ಶ್ರೀ.ಆರ್.ಸಂಪತ್‌ರಾಜ್ ರವರು ಪಾಲಿಕೆಯ ವಾರ್ಡ್ ಸಮಿತಿಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ವಾರ್ಡ್ ಕಮಿಟಿ ಸದಸ್ಯರು ಸೋಮವಾರದಿಂದ ಆಯಾಯಾ ಪ್ರದೇಶಗಳಲ್ಲಿರುವ ಮೇಜರ್ ಕೆಲಸ ಕಾರ್ಯಗಳ ಕುಂದು ಕೊರತೆಗಳ ಬಗ್ಗೆ ಪರಿಶೀಲಿಸಿ ಅಧ್ಯಕ್ಷರಿಗೆ ವರದಿ ನೀಡಲು ತಿಳಿಸಿದರು.

ಹಾಗೂ ಮಂಗಳವಾರದಿಂದ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಆಯಾ ಪ್ರದೇಶಗಳಲ್ಲಿರುವ ಕುಂದು ಕೊರತೆಗಳ ಬಗ್ಗೆ ಸ್ಥಳ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಸದಸ್ಯರು ನೀಡುವ ಕೆಲಸ ಕಾರ್ಯಗಳ ಕುಂದು ಕೊರತೆಗಳ ಪಟ್ಟಿಯನ್ನು ವಾರ್ಡ್ ಕಮಿಟಿಯಲ್ಲಿ ಅನುಮೋದಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ವಾರ್ಡ್ ಕಮಿಟಿ ಸದಸ್ಯರಿಗೆ ವಾರ್ಡ್ ಸಂಖ್ಯೆ: 47 ರ ವ್ಯಾಪ್ತಿಯಲ್ಲಿ ಪ್ರದೇಶಗಳನ್ನು ಹಂಚಿಕೆ ಮಾಡಲಾಗಿದ್ದು, ಅವುಗಳ ವಿವರ ಈ ಕೆಳಕಂಡಂತಿರುತ್ತದೆ.

1) ಎಲಿಲ್ ಸದಸ್ಯರು ರವರಿಗೆ ಇ ಬ್ಲಾಕ್ ನಿಂದ ಮಾರ್ಕೆಟ್ ರಸ್ತೆ, ಸುಜನ್‌ನಗರ, ದೊಡ್ಡಣ್ಣನಗರ ಮುಖ್ಯರಸ್ತೆ, 2ನೇ ಕ್ರಾಸ್, ಆಷಿಮ್ ಲೇಔಟ್, ಮಿಷನ್ ಕಾಂಪೌಂಡ್,

2) ಗೋಪಿ ಸದಸ್ಯರು ರವರಿಗೆ ಖಯುಂ ಗಾರ್ಡನ್, ದೊಡ್ಡಣ್ಣ ನಗರ 3ನೇ ಕ್ರಾಸ್, ಮುರುಗನ್ ದೇವಸ್ಥಾನ, ಪಂಜಪ್ಪ ಲೇನ್, ಕಾಳಯಪ್ಪ ಲೇನ್,

**ಮು.ತಿ.ನೋ.**

3) ರಾಬಿಯಾ, ಸದಸ್ಯರು ರವರಿಗೆ ಇಂದಿರಾ ಮೆಮೋರಿಯಲ್ ಸ್ಕೂಲ್, ಆಜುಬಾಯಿ ಗಲ್ಲಿ, ರಾಮಸ್ವಾಮಿ ಗಲ್ಲಿ, ಶ್ರೀನಿವಾಸನಗರ ರಾಣಿ ಸ್ಕೂಲ್, ಷುಗರ್ ಮಂಡಿ,

4) ಇರುದಯಮೇರಿ ಮತ್ತು ಸರಸ್ವತಿ, ಸದಸ್ಯರು ರವರಿಗೆ ತಂಗಮಲ್ಲೈ ನಗರ, ಎ ಬ್ಲಾಕ್, ಬಿ ಬ್ಲಾಕ್, ಹುಸೇನ್ ಮಸೀದಿ, ಸ್ಮಶಾನದ ರಸ್ತೆ, ಮುರುಗನ್ ದೇವಸ್ಥಾನದ ಹಿಂಭಾಗ,

5) ಜೀವಮಣಿ, ಸದಸ್ಯರು, ರವರಿಗೆ ವಿನಾಯಕ ಟಾಕೀಸ್, ಅಮಾವಾಸ್ಯೆ ಲೇನ್, ದೊಡ್ಡಣ್ಣನಗರ ಎಡಭಾಗ, ಮುನಿಮಾರಪ್ಪ ಲೇಔಟ್,

6) ಅಜುಂ ಪಾಷ, ಸದಸ್ಯರು, ರವರಿಗೆ ಈದ್ಗಾಮೊಹಲ್ಲಾ, ರೋಷನ್ ನಗರ, ಇಂದಿರಾಪುರಂ, ಟಿಪ್ಪುಮೊಹಲ್ಲಾ,

7) ಸ್ಟೀಪನ್, ಸದಸ್ಯರು, ಸುಜನ್ ನಗರ, ಪಂಜಪ್ಪ ಲೇನ್,

8) ಮೊಹಮ್ಮದ್ ಅಮೀದ್, ಸದಸ್ಯರು, ಮೋದಿ ಗಾರ್ಡ್‌ನ್,

9) ವೇಲು, ಸದಸ್ಯರು, ವರಲಕ್ಷ್ಮಿ ನಗರ, ಬಂಗಾರಗಿರಿ ನಗರ ಮುಖ್ಯರಸ್ತೆ, ಓಲ್ಡ್ ಕೆಇಬಿ ರಸ್ತೆ, ಮುನಿನಂಜಪ್ಪ ಲೇಔಟ್, ಮುನಿನಾಗಪ್ಪ ಲೇಔಟ್, ಬಜ್ಜಿ ಕಾಂಪೌಂಡ್, ಉಪೇಂದ್ರಸಿಂಗ್ ರಸ್ತೆ,

ಈ ಮೇಲ್ಕಂಡ ಎಲ್ಲಾ ಸದಸ್ಯರುಗಳು ಈಗಾಗಲೇ ನಡೆಯುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಪರಿಶೀಲನೆ ಮಾಡಿ ಅಧಿಕಾರಿರವರಿಗೆ ಮಾಹಿತಿ ನೀಡಲು ತಿಳಿಸಿದರು. ಹಾಗೂ ಈ ಪಟ್ಟಿಯನ್ನು ವಾರ್ಡ್ ಕಮಿಟಿಯಲ್ಲಿ ಅನುಮೋದನೆ ಪಡೆಯಲು ತಿಳಿಸಿದರು.

ಸಾರ್ವಜನಿಕರು ತುರ್ತಾಗಿ ನೀಡುವ ಹೊಸ ಕೆಲಸ ಕಾರ್ಯಗಳನ್ನು ಪರಿಶೀಲಿಸಿ ಸಂಕ್ರಾಂತಿ ಹಬ್ಬದ ನಂತರ ಸದರಿ ಪಟ್ಟಿಯನ್ನು ಬಿಬಿಎಂಪಿಯಲ್ಲಿ ಅನುಮತಿ ಪಡೆದು 17 ದಿನಗಳ ಒಳಗೆ ಕೆಲಸ ಪ್ರಾರಂಭಿಸಿ 3 ತಿಂಗಳ ಒಳಗೆ ಮುಕ್ತಾಯಗೊಳಿಸಲು ತಿಳಿಸಿದರು.

ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ ಸದಸ್ಯರು ಆಯಾ ಪ್ರದೇಶಗಳಲ್ಲಿ ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ದೊರೆಸ್ವಾಮಿ, ಎಇಇ, (ಎಸ್‌ಡಬ್ಲ್ಯೂಎಂ), ಕಿಷನ್, ಆರೋಗ್ಯ ಪರಿವೀಕ್ಷಕರು ರವರ ಜೊತೆ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು.

ಎಇಇ, ಎಸ್‌ಡಬ್ಲ್ಯೂಎಂ ರವರು ಹಿಂದಿನ ಸಭೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಈ ಬಗ್ಗೆ ಕೂಡಲೇ ಮಾಹಿತಿಯನ್ನು ಒದಗಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ ವಾರ್ಡ್-47, ವಾರ್ಡ್ ಸಮಿತಿ
ಹಾಗೂ ಸಹಾಯಕ ಕಂದಾಯ ಅಧಿಕಾರಿ
ಪುಲಿಕೇಶಿನಗರ ಉಪ ವಿಭಾಗ, ಬಿಬಿಎಂಪಿ

(ಆರ್.ಸಂಪತ್‌ರಾಜ್)
ಅಧ್ಯಕ್ಷರು ಹಾಗೂ ಸದಸ್ಯರು
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

ಮು.ತಿ.ನೋ.

**ಪ್ರತಿಯನ್ನು:**

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ವಾರ್ಡ್ ಸಮಿತಿಯ ಸದಸ್ಯರು. ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
13. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
14. ಕಛೇರಿ ಕಡತಕ್ಕೆ.